# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು 56002.**

**<u>ಪತ್ರಿಕಾ ಪ್ರಕಟಣೆ</u>** **ದಿನಾಂಕ: 28.06.2019**

## *ಮಹದೇವಪುರ ವಲಯದಲ್ಲಿ ಪಾದಚಾರಿ ರಸ್ತೆ ಒತ್ತುವರಿ ತೆರವು ಕಾರ್ಯಾಚರಣೆ ಕುರಿತು.*

ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರ ಅಭಿವೃದ್ಧಿ ಸಚಿವರು ಮತ್ತು ಮಾನ್ಯ ಪಾಲಿಕೆ ಆಯುಕ್ತರು ರವರ ಸೂಚನೆಯ ಮೇರೆಗೆ ದಿನಾಂಕ:28–06–2019ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವಲಯದ ವಾರ್ಡ್ ಅಭಿಯಂತರರ ನೇತೃತ್ವದಲ್ಲಿ ಮಹದೇವಪುರ ವಲಯದ ವಾರ್ಡ್–150 ರಲ್ಲಿ ಬರುವ ಬೆಳ್ಳಂದೂರು, ದೊಡ್ಡಕನ್ನಲ್ಲಿಯಿಂದ ಎಇಟಿ ಜಂಕ್ಷನ್‌ವರೆಗೆ ರಸ್ತೆ ಬದಿಗಳಲ್ಲಿ ಅನಧಿಕೃತವಾಗಿ ಶೆಡ್‌ಗಳನ್ನು ನಿರ್ಮಿಸಲಾಗಿದ್ದು ಒತ್ತುವರಿ ತೆರವು ಕಾರ್ಯಾಚರಣೆಯನ್ನು ಹಮ್ಮಿಕೊಂಡು, ಒಟ್ಟು–35 ತಾತ್ಕಾಲಿಕ ನಿರ್ಮಿಸಲಾಗಿದ್ದ ಅನಧಿಕೃತವಾಗಿ ಶೆಡ್‌ಗಳ ತೆರವುಗೊಳಿಸಲಾಗಿದ್ದು ಅದೇ ರೀತಿ ವಾರ್ಡ್–55ರ ದೇವಸಂದ್ರದ ಅಗ್ನಿ ಶಾಮಕ ದಳ ರಸ್ತೆಯಲ್ಲಿ ಬರುವ ಪಾದಚಾರಿ ರಸ್ತೆ ಒತ್ತುವರಿ ಮಾಡಿಕೊಂಡಿದ್ದಂತಹ ಒಟ್ಟು 23 ತಾತ್ಕಾಲಿಕ ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ ಹಾಗೂ ಸದರಿ ಕಾರ್ಯಾಚರಣೆಯನ್ನು ಮುಂದಿನ ದಿನಗಳಲ್ಲಿ ಇತರೆ ವಾರ್ಡ್‌ಗಳಲ್ಲಿಯೂ ಸಹ ಹಮ್ಮಿಕೊಳ್ಳಲಾಗುವುದೆಂದು ಮಹದೇವಪುರ ವಲಯದ ಮುಖ್ಯ ಅಭಿಯಂತರರಾದ ಶ್ರೀ ಆರ್.ಎಲ್.ಪರಮೇಶ್ವರಯ್ಯ ರವರು ತಿಳಿಸಿದ್ದಾರೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

- ಶ್ರೀ ಆರ್.ಎಲ್.ಪರಮೇಶ್ವರಯ್ಯ, ಮುಖ್ಯ ಅಭಿಯಂತರರು (ಮಹದೇವಪುರ)
  **ಮೊಬೈಲ್ ಸಂಖ್ಯೆ: 9480683181**

**ಈ ವಿಷಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ. (ಛಾಯಾ ಚಿತ್ರಗಳನ್ನು ಲಗತ್ತಿಸಿದೆ)**

**ಸಾರ್ವಜನಿಕ ಸಂಪರ್ಕಾಧಿಕಾರಿ.**


ದಿ ಕೇಕ್ ಕಾರ್ನರ್
THE CAKE CORNER
TO-LET



